# ಅರಣ್ಯ ಸಿಬ್ಬಂದಿಗಳಿಗೆ ಸನ್ಮಾನ




**ಹನಗೋಡು:** 66ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಹನಗೋಡು ರೋಟರಿ ಸಂಸ್ಥೆ ವತಿಯಿಂದ ಅರಣ್ಯ ಸಿಬ್ಬಂದಿಗಳಿಗೆ ಸನ್ಮಾನಿಸಲಾಯಿತು.

ನಾಗರಹೊಳೆ ರಾಷ್ಟ್ರೀಯಾ ಉದ್ಯಾನವನದ ವೀರನಹೊಸಹಳ್ಳಿ ವಲಯದ ವಲಯಾಧಿಕಾರಿಗಳ ಕಛೇರಿಯಲ್ಲಿ ಹನಗೋಡು ರೋಟರಿ ಸಂಸ್ಥೆ ಅಧ್ಯಕ್ಷ ಕಿರಂಗೂರು ಬಸವರಾಜ್ ನೇತೃತ್ವದ ತಂಡ ಅರಣ್ಯಾಧಿಕಾರಿ ಟಿ.ಎಂ.ರವೀಂದ್ರ, ಡಿ.ಆರ್‌ಎಫ್‌ಒಗಳಾದ ಚಂದ್ರೇಶ್. ದ್ವಾರಕನಾಥ್. ನವೀನ್‌ಕುಮಾರ್ ರವರನ್ನು ಸನ್ಮಾನಿಸಿ ಅರಣ್ಯ ಇಲಾಖೆಯ ಸಿಬ್ಬಂದಿಗಳು ವನ್ಯಪ್ರಾಣಿಗಳ ಸ್ವೇಚ್ಛೆಗೆ ಧಕ್ಕೆ ಬಾರದಂತೆ, ಪರಿಸರ ಹಾಗೂ ವನ್ಯಜೀವಿಗಳನ್ನು ಕಾಪಾಡುವುದರೊಂದಿಗೆ ಕಾಡಂಚಿನ ಜನರ ನಡುವೆ ಸಮನ್ವಯತೆ ಕಾಪಾಡುವ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸುತ್ತಿರುವುದು ಹೆಮ್ಮೆಯಾಗಿದೆ. ಇಂತಹ ವ್ಯಕ್ತಿಗಳನ್ನು ಸಮಾಜ ಗುರುತಿಸಿ ಗೌರವಿಸುವ ಕೆಲಸವಾಗಬೇಕು ಎಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ಪಧಾಧಿಕಾರಿಗಳಾದ ವೆಂಕಟಪ್ಪ, ಆಶ್ರಕ್, ಗಣಪತಿ, ಶ್ರೀಧರ್.ಮಂಜುಳ, ಛಾಯಾಮಣಿ.ಪೂಜಾ ಸೇರಿದಂತೆ ಇತರರು ಹಾಜರಿದ್ದರು.

# ಅರಣ್ಯ ಸಿಬ್ಬಂದಿಗೆ ರೋಟರಿ ಸನ್ಮಾನ




ವನ್ಯಜೀವಿ ಸಪ್ತಾಹದ ಅಂಗವಾಗಿ ಹನಗೋಡು ರೋಟರಿ ಸಂಸ್ಥೆವತಿಯಿಂದ ವೀರನಹೊಸಹಳ್ಳಿ ವಲಯದ ಅರಣ್ಯ ಸಿಬ್ಬಂದಿಗಳಿಗೆ ಸನ್ಮಾನಿಸಲಾಯಿತು.

ಹುಣಸೂರು: ತಾಲೂಕಿನ ಹನಗೋಡು ರೋಟರಿ ಸಂಸ್ಥೆ ವತಿಯಿಂದ 66ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಅರಣ್ಯವನ್ನು ಜತನದಿಂದ ಕಾಯುತ್ತಿರುವ ಅಧಿಕಾರಿ-ಸಿಬ್ಬಂದಿಗಳಿಗೆ ಸನ್ಮಾನಿಸಲಾಯಿತು.

ನಾಗರಹೊಳೆ ಉದ್ಯಾನವನದ ವೀರನಹೊಸಹಳ್ಳಿ ವಲಯದ ವಲಯಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ, ಆರ್‌ಎಫ್‌ಒ ರವೀಂದ್ರ, ಡಿಆರ್‌ಎಫ್‌ಒಗಳಾದ ಚಂದ್ರೇಶ್, ದ್ವಾರಕನಾಥ್, ನವೀನ್‌ಕುಮಾರ್ ಮತ್ತಿರರನ್ನು ಸನ್ಮಾನಿಸಲಾಯಿತು.

ಈ ವೇಳೆ ಹನಗೋಡು ರೋಟರಿ ಸಂಸ್ಥೆ ಅಧ್ಯಕ್ಷ ಕಿರಂಗೂರು ಬಸವರಾಜ್, ಸಂಸ್ಥೆಯ ಪದಾಧಿಕಾರಿಗಳಾದ ವೆಂಕಟಪ್ಪ, ಛಾಯಾಮಣಿ, ಆಶ್ರಕ್, ಗಣಪತಿ, ಶ್ರೀಧರ್, ಮಂಜುಳಾ, ಪೂಜಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

CS Scanned with CamScanner